ಉಕ್ಕಿತು. ಬನ್, ಬಿಸ್ಕತ್ತನ್ನು ತಿನ್ನಿಸುತ್ತ ಮರಿಗಳನ್ನು ಎತ್ತಿ ಮುದ್ದಾಡಿದ. ಮನಸ್ಸು ಹತೋಟಿಗೆ ಬಂದು ಊರು ಬಿಡುವ ಯೋಚನೆ ಮಂಜುಗಡ್ಡೆಯಂತೆ ಕರಗಿತು.

ಮರುದಿನ ಮತ್ತದೇ ಹುರುಪಿನಲ್ಲಿ ಏನೂ ಆಗಿಲ್ಲವೆಂಬಂತೆ ಮಾದೇವ ಖಾನಾವಳಿಗೆ ಬಂದು ಕಸ ಗುಡಿಸಿ, ಒತ್ತುಗಾಡಿಯಲ್ಲಿ ನೀರು ತಂದು ನಿತ್ಯದ ಕೆಲಸದಲ್ಲಿ ತೊಡಗಿಸಿಕೊಂಡ. ಧರೆಪ್ಪ ಏನೊಂದು ಮಾತನಾಡಲಿಲ್ಲ. ಮಾದೇವ ಮರಳಿ ಬಂದಿರುವುದು ಅವನಿಗೆ ಆನೆಬಲ ಬಂದಂತಾಗಿರುವುದು ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಮಧ್ಯಾಹ್ನ ಆಗುವುದೇ ತಡ ಧರೆಪ್ಪ ಹೇಳುವುದಕ್ಕೆ ಮೊದಲೇ ಮಾದೇವ ಕೈ ಚೀಲ ತೆಗೆದುಕೊಂಡು ತರಕಾರಿ ತರಲು ಎ.ಪಿ.ಎಂ.ಸಿಗೆ ಹೊರಡಲು ತಯಾರಾಗಿ ನಿಂತ. ಧರೆಪ್ಪ ಹೇಳಲೋ ಬೇಡವೋ ಎಂಬಂತೆ 'ಬ್ಯಾಡ ನೀ ಹೋಗಬ್ಯಾಡ.. ಊಟ ನೀಡು' ಎಂದ. ಮಾದೇವ 'ಇಲ್ಲ ಕಾಕಾ ಹೋಗಿ ಬರ್ತಿನಿ ಜಲ್ದಿ' ಎಂದು ಅವಸರದಲ್ಲಿ ಹೋದ.

ದೀಪಾವಳಿ ಹಬ್ಬ ಸಮೀಪಿಸಿತ್ತು. ಎಲ್ಲ ಅಂಗಡಿ ಮುಂಗಟ್ಟುಗಳು ಶೃಂಗಾರಗೊಂಡಿದ್ದವು. ಲಿಂಗಾಯತ ಖಾನಾವಳಿ ಲೈಟ್ ಬೆಳಕಿನಲ್ಲಿ ಥಳಥಳ ಹೊಳೆಯುತ್ತಿತ್ತು. ಧರೆಪ್ಪ ಎಲ್ಲ ಕೆಲಸಗಾರರಿಗೆ ಸಂಬಳ ಮಾಡಿ, ಎಲ್ಲರಿಗೂ ಒಂದೇ ತೆರನಾದ ಹೊಸ ಬಟ್ಟೆ ಕೊಡಿಸಿ, ಇನ್ಮುಂದೆ ಎಲ್ಲರೂ ಇದೇ ಬಟ್ಟೆ ಹಾಕಿಕೊಂಡು ಕೆಲಸ ಮಾಡಲು ಹೇಳಿದ. ಅವತ್ತು ಮಾದೇವ ಕಾಲಲ್ಲಿ ಚಪ್ಪಲಿ ಹಾಕಿಕೊಂಡಿದ್ದ. ಅದನ್ನು ನೋಡಿ 'ಮಾದ್ಯಾನ ದೀಪಾವಳಿ ಜೋರಾದ' ಎಂದು ಎಲ್ಲರೂ ತಮಾಷೆ ಮಾಡುತ್ತಿದ್ದರು. ವರ್ಷಗಳ ನಂತರ ಚಪ್ಪಲಿ ಕಂಡಿದ್ದ ಅವನ ಪಾದಗಳು ಪ್ರತಿ ಹೆಜ್ಜೆ ಇರಿಸಿದಾಗಲೊಮ್ಮೆ ಅವನ ಮುಖದಲ್ಲಿ ಕಿರುನಗೆ ಹೊಮ್ಮಲು ಕಾರಣವಾಗಿದ್ದವು. ಅದೇ ಖುಷಿಯಲ್ಲಿ ತಂಗುದಾಣಕ್ಕೆ ಹೋಗಿ ನಾಯಿ ಮತ್ತು ಅದರ ಮರಿಗಳನ್ನು ಮುದ್ದಾಡಿ ಬಂದ. ಅವನ ಜೀವನದಲ್ಲಿ ಮೊದಲಬಾರಿಗೆ ದೀಪವಾಳಿ ಹಬ್ಬ ಸಡಗರದಿಂದ ಕೂಡಿತ್ತು.

ಮರುದಿನ ಮಧ್ಯಾಹ್ನ ಎಂದಿಗಿಂತಲೂ ಜಲ್ದಿಯೇ ಮುನಿಸಿಪಾಲಿಟಿ ಅಧಿಕಾರಿಗಳು ಊಟಕ್ಕೆ ಬಂದರು. ಅದರಲ್ಲಿಹಿಂದೊಮ್ಮೆಬಂದುಊಟಮಾಡದೇಧರೆಪ್ಪನ ಕಿವಿಯಲ್ಲಿ ಏನೋ ಪಿಸುಗುಟ್ಟಿ ಹೋಗಿದ್ದ ಬೋಳು ತಲೆಯ ಆ ಅಧಿಕಾರಿಯೂ ಇದ್ದ. ಮಾದೇವನನ್ನು ನೋಡುತ್ತಲೇ ಮುಖ ಸಿಂಡರಿಸಿಕೊಂಡು ಗಲ್ಲಾ ಮೇಲೆ ಕೂತಿದ್ದ ಧರೆಪ್ಪನ ಬಳಿ ಬಂದು 'ನಾ ನಿಮಗ್ ಏನು ಹೇಳಿದ್ನಿ? ನಾವು ನಿಮ್ಮ ಖಾನಾವಳಿಗಿ ಬರೋಮು ಬ್ಯಾಡ ಹೇಳ್ರಿ?' ಎಂದ. ಧರೆಪ್ಪ ಅಧಿಕಾರಿಯನ್ನೊಮ್ಮೆ ಮತ್ತು ತನ್ನ ಪಾಡಿಗೆ ಹೆಗಲ ಮೇಲೆ ಟವಲ್ ಹಾಕಿಕೊಂಡು ಕೆಲಸ ಮಾಡುತ್ತಿದ್ದ ಮಾದೇವನ ಕಡೆಗೊಮ್ಮೆ ನೋಡಿದ. ಮಾದೇವನ ನಿಷ್ಕಲ್ಮಶ ಮನಸ್ಸು, ಮುಖದಲ್ಲಿನ ಮುಗ್ಧತೆ, ಯಾವುದೇ ಕೃತಕತೆಯಿಲ್ಲದ ಅವನ ನಡೆ ಎಲ್ಲವೂ ಕಣ್ಮುಂದೆ ಬಂದವು. ಎದ್ದು ನಿಂತು ಮಂಜುಮಂಜಾಗಿ ಕಾಣುತ್ತಿದ್ದ ತನ್ನ ಚಸ್ಮಾ ಒರೆಯಿಸಿಕೊಳ್ಳುತ್ತಾ... 'ಮೊದ್ಲು ಹೊರಗ ಹೋಗೋ ಮಾರಾಯಾ... ನಿನ್ನ ಕೈ ಮುಗಿತೀನಿ... ನಮ್ಮ ನೆಮ್ಮದಿ ಕೆಡಸ್ಲಾಕ ಯಾಕ ಬರ್ತಿರಿ... ನಿಮ್ಮಂಥವರು ನಮ್ಮ ಖಾನಾವಳಿಗಿ ಬರೋದೆ ಬ್ಯಾಡ... ಹೋಗು ಮೊದ್ಲ' ಎಂದು ಚೀರಾಡಿದ. ಧ್ವನಿ ವಿಕಾರ ರೂಪ ಪಡೆದಿತ್ತು.

ಇದ್ಯಾವುದನ್ನು ನಿರೀಕ್ಷಿಸದಿದ್ದ ಆ ಅಧಿಕಾರಿಯ ಮುಖ ಒಮ್ಮೆಲೇ ಕಪ್ಪಿಟ್ಟಿತು. ಈ ಪ್ರಹಸನ ಖಾನಾವಳಿಯಲ್ಲಿದ್ದವರನ್ನು ಗಾಬರಿ ತರಿಸಿತ್ತು. ಊಟ ಮಾಡವುದನ್ನು ಬಿಟ್ಟು ಎಲ್ಲರೂ ತಿರುಗಿ ಅವನನ್ನೇ ನೋಡುತ್ತಿದ್ದರು.

ಆ ಅಧಿಕಾರಿಗೆ ಎಲ್ಲರೆದುರು ಖಜಿಲ್ ಆಯಿತು. ತನ್ನ ಬೋಳು ತಲೆಯ ಮೇಲೆ ಕೈ ಆಡಿಸಿಕೊಳ್ಳುತ್ತ 'ಈ ಮಕ್ಳು ನಮ್ಮೂರಾಗ ಮೆಟ್ಟು ಹೊಲಿತಾರ... ಅವ್ರ ಕಡೆಯಿಂದ ಹಾಕಿಸಿಕೊಂಡು ನಾ ತಿನ್ಲೇನು?' ಎಂದು ತನಗೆ ಮಾತ್ರ ಕೇಳಿಸುವಂತೆ ಗೊಣಗುತ್ತ ಹೊರಗೆ ಹೋದ.

ನಂತರದಲ್ಲಿ ಖಾನಾವಳಿ ವಾತವಾರಣ ತಿಳಿಯಾಯಿತು. ಮಾದೇವ ಎಂದಿನಂತೆ ತರಕಾರಿ ತರಲು ಎ.ಪಿಎಂ.ಸಿಗೆ ಕೈಯಲ್ಲಿ ಚೀಲ ಹಿಡಿದುಕೊಂಡು ಬರಬರನೇ ಕೈ ಬೀಸುತ್ತ ಹೊರಟ. ಗಲ್ಲಾ ಮೇಲೆ ಕೂತಿದ್ದ ಧರೆಪ್ಪ ಎದ್ದು ಹೊರಗೆ ಬಂದು ಜೋರಾಗಿ 'ಮಾದೇವ' ಎಂದು ಕರೆದ. ಯಾವಾಗಲೂ ಮಾದ್ಯಾ ಮಾದ್ಯಾ ಎನ್ನುತ್ತಿದ್ದ ಧರೆಪ್ಪ ಕಾಕಾ ಇಂದು ಮಾದೇವ ಎಂದಿದ್ದು ಅವನಿಗೆ ತಕ್ಷಣಕ್ಕೆ ನಂಬಲಾಗಲಿಲ್ಲ. ಅನುಮಾನದಲ್ಲಿಯೇ ತಿರುಗಿ ನಗುತ್ತ ನೋಡಿದ. ಧರೆಪ್ಪ ಸುಮ್ಮನೇ ನೋಡುತ್ತಿದ್ದ. ಅವನ ನೋಟದಲ್ಲಿ ಮಾತಿಗೆ ಮೀರಿದ ಅರ್ಥಗಳು ಧ್ವನಿಸುತ್ತಿದ್ದವು.

●